ಕೋಲಾರ ಡಿಸ್ಟ್ರಿಕ್ಟು.

ತಾರೀಖು 3ನೇ ಮಾರ್ಚ್ 1903.

ಕೋಲಾರ ತಾಲ್ಲೂಕಿಗೆ ಶೇರಿದ ಜೋಡಿ ಅಜ್ಜಪ್ಪಲ್ಲಿ ಗ್ರಾಮವು ಸರಕಾರಕ್ಕೆ ಬರಬೇಕಾದ ಜೋಡಿ ಬಾಕಿಗೋಸ್ಕರವಾಗಿ ಕೋಲಾರ ತಾಲ್ಲೂಕು ಅಮಲ್ದಾರ್ ಕಛೇರಿಯಲ್ಲಿ 1903ನೇ ಇಸವಿ ಏಪ್ರೆಲ್ 28ನೇ ತಾರೀಖು ದಿವಿ 11 ಘಂಟೆಗೆ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

(ಹಚ್ಚ್ಚು ತಪಶೀಲ್ ಬಗ್ಯೆ 12—3—1903ನೇ ವರ್ತಂ 10ನೇ ನಂಬರಿ ಮೈಸೂರು ಗೆಜೆಟಿನ 2ನೇ ಭಾಗದ 88ನೇ ನಂಬರ ಪೇಜು ನೋಡತಕ್ಕದ್ದು.)

ಎಫ್. ಸಿ. ಕಾರ್,
ಡೆಪ್ಯುಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟು ಜಡ್ಜ್‌ರವರ ಕೋರ್ಟಿನಲ್ಲಿ.

ಸ್ ೧೯೦೨—೧೯೦೩ನೇ ಇಸವಿ ಅರ್ಜೀ ನಂಬರ್ 308.

ಮೃತಪಟ್ಟ ಶಿದ್ದಲಿಂಗೇಗೌಡರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಹಾಸನದ ಡಿಸ್ಟ್ರಿಕ್ಟು ಅರಕಲಗೂಡು ತಾಲ್ಲೂಕು ಮಾರೂರು ಹೋಬಳಿ ಸರ್ವಮಾನ್ಯ ಹೆತ್ತಗೂಡ್ನಹಳ್ಳಿ ಗ್ರಾಮದಲ್ಲಿರುವರು, ಪಂತಿ ಶಿದ್ದಲಿಂಗೆ ಗೌಡನ ಮಗ 1ನೇ ಅಪ್ಪಾಜಿ ಮೈನರ್, ಗಾರ್ಡಿಯರ್ ತಾಯಿ ದೇವಮ್ಮ, ಪಂತಿ ಶಿದ್ದಲಿಂಗೇಗೌಡನ ಅವಿಭಕ್ತ ಸಹೋದರ 2ನೇ ಈರಂಣಾ, ಮೃತಪಟ್ಟ ಸದರೀ ಶಿದ್ದಲಿಂಗೇಗೌಡರಿಗೆ ವಾರಸ್‌ದಾರ್ರು ಆಗಬೇಕೆಂಬ ಹಕ್ಕ್ದಾರಿ ಮೇಲೆ ಹೆತ್ತಗೂಷ್ನಹಳ್ಳಿ ಸ್ಥಳದ ಮೇಲ್ಕಂಡವರು ಸದರಿ ವಾಸಸ್ಥರಾಗಿ ಮೃತಪಟ್ಟ ಶಿದ್ದಲಿಂಗೇಗೌಡರ ಜೀಂದಗಿ ಬಗ್ಗ್ಯಾಗಿ ಬರತಕ್ಕ (1,600) ರೂಪಾಯಿ ಸಾಲವನ್ನು ವಸೂಲ ಮಾಡುವದಕ್ಕೆ ಸ್ ೧೯೦೧ನೇ ಇಸವಿ 7ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ದೇವಮ್ಮ ವಗೈರೇರ ಅರ್ಜಿಯನ್ನು ಸ್ ೧೯೦೩ನೇ ಇಸವಿ ಜೂನ್ ತಿಂಗಳು ತಾರೀಖು 12ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸಿದ್ದಲಿಂಗೇಗೌಡರ ಆಸ್ತಿಗೆ ಹಕ್ಕ್ದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೩ನೇ ಇಸವಿ ಮಾರ್ಚ್ ತಿಂಗಳು 18ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತ್ಖತ್ತೊಡನೆ ಕೊಡೋಣಾಗಿದೆ.

ಎಂ. ರಾಮಸ್ವಾಮಯ್ಯರ್, ಡಿಸ್ಟ್ರಿಕ್ಟ್ ಜಡ್ಜ್.

ಬೆಂಗಳೂರು ಸಬ್ ಜಡ್ಜ್‌ರವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರೀ ದೇಣೇದಾರ ಮಾಜಂಖಾರ ವಿಷಯದಲ್ಲಿ—

ಸ್ ೧೯೦೨—೧೯೦೩ನೇ ಇಸವಿ ದಿವಾಳೀ ಕೇಸ್ ನಂಬರ್ 266.

ಹುಕ್ಕುಂ.

ಅರ್ಜಿದಾರ ಮಾಜಂಖಾನನು ಮೇಲ್ಕಂಡ ನಂಬರುನಲ್ಲಿ ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಆ[illegible] ಈ ಕೋರ್ಟಿನವರ ರೂಬರೂ ಅರ್ಜಿದಾರನಾದ ಮಾಜಂಖಾ ಹಾಜರು ಅರ್ಜಿದಾರನನ್ನು ದಕ್ಯಾಫ್ತೀ ಮಾಡಲ್ಪಟ್ಟಿತು.

ಈ ಮಾರ್ಜಿನ್ನಲ್ಲಿ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದಕ್ಯಾಫ್ತೀ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು.

1ನೇ ಸುಬ್ಬರಾವು
2ನೇ ಮಹಮ್ಮದು ಅಲ್ಲಿ
3ನೇ ಚಿಕ್ಕ ಈರಂಣ

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಅರ್ಜಿದಾರ ಮಾಜಂಖಾ ಹೊಂದುವದಕ್ಕೆ ಹಕ್ಕ್ದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟರುತ್ತೆಯಾಗಿ ಸದರೀ ದಿವಾಳಿಯಾದವನನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರೀಯಿಂದ ಸಹ ಅವನನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ ೧೯೦೩ನೇ ಇಸವಿ ಮಾರ್ಚ್ 16ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತು ನಿಸಿ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರ್.	ಲೇಣೇದಾರ್ರು ಅಥವಾ ಹಕ್ಕ್ದಾರರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣೆ ಪುಂಟಾದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಏನಾದರೂ ಇದ್ದರೆ.
1	ಸುಬ್ಬರಾವು ಬೆಂಗಳೂರು ಕೊಟೆಯಲ್ಲಿರುತ್ತಾರೆ	62—6—6	...	1902—03ನೇ ಜಾ॥ 29ನೇ ನಂಬರು ವಾರಂಟು ಪ್ರಕಾರ ಕೈಸಾಲದ ಬಾಬತ್ತು
2	ಕಂಟ್ರಾಕ್ಟರು ಮಹಮ್ಮದು ಅಲ್ಲಿ ...	25—0—0	..	
3	ಚಿಕ್ಕ ಈರಂಣ ಮಾಲೂರು ತಾಲ್ಲೂಕು ಯಕವಂಚಪುರ.	60—0—0	..	ಡಿಟೋ

ಪಿ. ಸಿಂಗ್ಯಾಚಾರ್, ಸಬ್ ಜಡ್ಜ್.

ನೋಟಿಸ್.

ಸಿವಿಲ್ ಪ್ರೊಸೀಡರು ಕೋಡು 30ನೇ ಸೆಕ್ಷನ್‌ಮೇರೆ.

ಮೈಸೂರು ಪ್ರೊವಿನ್ಸಿಯಲ್ ಮುನ್ಸೀಫ್ ಕೋರ್ಟ್‌ನಲ್ಲಿ.

1902—1903ನೇ ಇಸವಿ ಸಿವಿಲ್ ವ್ಯಾಜ್ಯದ ನಂಬರು 125.

ವಾದಿ.	ಪ್ರತಿವಾದಿ.
ಮೈಸೂರು ಮಂಡಿ ಮೊಹಲ್ಲಾ ನಕ್ಷೆಬಂದು ಬೀದೀಲಿ ಇರುವ ವ್ಯಾಪಾರ ಕಸಬಿನ ಕರಿಯಂಣ್ಣ.	1ನೇ ಮೈಸೂರು ಮಂಡಿ ಮೊಹಲ್ಲಾ ನಕ್ಷೆಬಂದು ಬೀದೀಲಿ ಇರುವ ನೆಕ್ಕದ ಅಂಗಡೀ ದಾವೂದುಸಾಬಿ. 2ನೇ ಸದರೀ ಸ್ಥಳದಲ್ಲಿ ಇರುವ ಆಕ್ಕಿ ಅಂಗಡಿ ಬುಡ್ಡಸಾಬಿ. 3ನೇ ಸದರೀ ಸ್ಥಳದಲ್ಲಿ ಇರುವ ನೆಕ್ಕದ ಅಂಗಡಿ ದಾದೂಮಿಯ್ಯಾ.

ಇದರಿಂದ ಮೈಸೂರು ಮಂಡಿ ಮೊಹಲ್ಲಾ ನಕ್ಷೆಬಂದು ಬೀದಿಯಲ್ಲಿ ಇರುವ ಮುಸಲ್ಮಾನರ ಜಾತಿ ಜನಗಳಿಗೆ ತಿಳಿಯಪಡಿಸುವ ದೇನಂದರೆ, ಮೇಲ್ಕಂಡ ಶಿವಿಲ್ ನಂಬರಿನಲ್ಲಿ ಈ ಕೆಳಗೆ ವಿವರಿಸುವ ಷೆಡ್ಯೂಲಿನಲ್ಲಿ ಕಂಡ ಮನೆಗೆ ವಾದಿಯು ದಾವಾ ತಂದು ಇರುವದ್ದರಿಂದ ಈ ದಾವಾಕ್ಕೆ ಕಕ್ಷಿಗಾರರಾಗಿ ಶೇರತಕ್ಕ ಇಪ್ಪ್ಪುಳ್ಳವರು 1903ನೇ ಇಸವಿ ಮಾರ್ಚ್ ತಿಂಗಳು 18ನೇ ತಾರೀಖು ಬುಧವಾರ ದಿವಿ 11 ಘಂಟೆಗೆ ಈ ಕೋರ್ಟು ರೂಬರೂಬು ಹಾಜರಾಗಿ ತನ್ಮತನ್ಮ ಹಕ್ಕು ಬಾಧ್ಯತೆಯನ್ನು ಸ್ಥಾಪಿಸಿಕೊಳ್ಳತಕ್ಕದ್ದಿದೆ.

ಈ ತಾರೀಖು 28ನೇ ಫೆಬ್ರವರಿ 1903ನೇ ಇಸವಿ.

ಷೆಡ್ಯೂಲ್.

ಮೈಸೂರು ಮಂಡಿ ಮೊಹಲ್ಲಾ ನಕ್ಷೆಬಂದು ಬೀದಿಯಲ್ಲಿ ಇರುವ ಪೂರ್ವಕ್ಕೆ—ರತ್ನಶಿಂಗಯ್ಯನವರ ಅಂಗಡಿ ಮತ್ತು ಮಾಯಂಣನ ಮನೆ. ಪಶ್ಚಿಮಕ್ಕೆ—ಕರಿಯಂಣನ ಅಂಗಡೀ ಹಿತ್ತಲೂ ಸಹ. ದಕ್ಷಿಣಕ್ಕೆ—ರೋಡು. ಉತ್ತರಕ್ಕೆ—ಗರಡೀ ಬೀಳುಜಾಗಾ ಈ ಮಧ್ಯೆ ಇರುವ ಮೊಟ್ಟೆ ಮನೆ. ಪೂರ್ವಪಶ್ಚಿಮ ಗಜಾ 5½, ದಕ್ಷಿಣೋತ್ತರ ಗಜಾ 7 ಆಡಿ 2 ಗೋಡೆ ಸಹಾ ಮುಳ್ಳದ್ದು ಮತ್ತು ಇದಕ್ಕೆ ಸಂಬಂಧಪಟ್ಟ ಚರಸ್ವತ್ತು ಸಹಾ.

ಆನಂದರಾವ್ ಸಿರಸಿ,
ಪ್ರೊವಿನ್ಸಿಯಲ್ ಮುನ್ಸೀಫ್.

Mysore Government Central Press, Bangalore—1903.